# IN THE COURT OF THE ADDL. SENIOR CIVIL JUDGE & JMFC., GUBBI

# **OS - 88/2025**

Witness present and duly sworn on : 15/06/2026

Cross Examination: by Counsel for Defendant No.3 :

ಈ ದಾವೆಯ ಪ್ರತಿವಾದಿ ಆಂಜನಪ್ಪರವರ ತಂದೆ ಹನುಮಂತಯ್ಯರವರು ನನಗೆ ಗೊತ್ತಿದಾದರೆ. ಹನುಮಂತಯ್ಯನವರ ತಂದೆಯ ಹೆಸರು ರಂಗಯ್ಯ. ರಂಗಯ್ಯರವರಿಗೆ 5 ಜನ ಮಕ್ಕಳು ಇರಬಹದು. ಅವರುಗಳು ಸಂಜೀವಯ್ಯ, ಯಲ್ಲಯ್ಯ, ಹನುಮಂತಯ್ಯ, ರಂಗಧಾಮಯ್ಯ, ಕೃಷ್ಣಪ್ಪ . ರಂಗಯ್ಯ್ರವರಿಗೆ ಎಷ್ಟು ಸ್ವತ್ತುಗಳು ಇತ್ತು ಎಂದು ನನಗೆ ಗೊತ್ತಿಲ್ಲ. ರಂಗಯ್ಯನ 5 ಜನ ಮಕ್ಕಳು ಒಟ್ಟಿಗೆ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಅವರೆಲ್ಲರೂ ಸರ್ವೆ ನಂ.21 ನ್ನು ಒಟ್ಟಿಗೆ ಅನುಭವಿಸಿಕೊಂಡು ಇದ್ದರು ಎಂದರೆ ಹನುಮಂತಯ್ಯರವರು ಅನುಭವಿಸುತ್ತಿದ್ದರು. ಹನುಮಂತಯ್ಯರವರೊಂದಿಗೆ ರಂಗಯ್ಯರವರ ಮಗನಾದ ಯಲ್ಲ್ಯಯ್ಯರವರು ಅನುಭವಿಸುತ್ತಿದ್ದರು ಎಂದರೆ ಸರಿ. ರಂಗಯ್ಯನ 5 ಜನ ಮಕ್ಕಳು ಭಾಗ ಮಾಡಿಕೊಂಡಿದ್ದ ಬಗ್ಗೆ ನಾನು ನೋಡಿಲ್ಲ. 4 ಎಕರೆಯ ಜಮೀನನ್ನು ಅನುಭವಿಸಿಕೊಂಡು ಸ್ವಾಧೀನದಲ್ಲಿ ಇದ್ದರು ಎಂದರೆ ಸರಿ. ಹನುಮಂತಯ್ಯ ಮತ್ತು ಯಲ್ಲಯ್ಯ 4 ಎಕರೆಯ ಸ್ವಾಧೀನದಲ್ಲಿ ಇದ್ದಾರೆಂದರೆ 2 ಎಕರೆಯಲ್ಲಿ ದೊಡ್ಡಮಲ್ಲಯ್ಯ ಮತ್ತು 2 ಎಕರೆಯಲ್ಲಿ ಹನುಮಂತಯ್ಯನ ಮಕ್ಕಳು ಇದ್ದಾರೆ .

ನಾಗಯ್ಯ ಎಂದರೆ ನನ್ನ ತ ಂದೆ. ನಮ್ಮ ಊರಿನಲ್ಲಿ ನಾಗಯ್ಯ ಎಂಬ ಬಹಳಷ್ಟು ವ್ಯಕ್ತಿಗಳು ಇದ್ದಾರೆಂದರೆ ಸರಿ. ಆದ ಕಾರಣ ಉತ್ತರ ದಿಕ್ಕಿನಲ್ಲಿ ಇರುವ ವ್ಯಕ್ತಿ ನನ್ನ ತಂದೆ ನಾಗಯ್ಯ ಅಲ್ಲ ಎಂದರೆ ಸರಿಯಲ್ಲ. ವಾದಿ ದೊಡ್ಡಮಲ್ಲಯ್ಯರವರು 2 ಎಕರೆಯ ಸ್ವಾಧೀನದಲ್ಲಿ ಇಲ್ಲ ಮತ್ತು ಪ್ರತಿವಾದಿಗಳು ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಕ್ರಯಪತ್ರ ಮಾಡಿಕೊಟ್ಟಿಲ್ಲ, ಅದು ಸೃಷ್ಟಿಸಿರುವ ದಾಖಲೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರವನ್ನು ವಾದಿ ಬರೆಸಿದ್ದಾರೆಂದರೆ ನಾನು ಹೇಳಿ ಬರೆಸಿದ್ದೇನೆ. ವಾದಿಯ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**Cross Examination: by Counsel for Defendant No.1, 2 :**

ಸರ್ವೆ ನಂ.9/1 ಯಾವ ವರ್ಷದಲ್ಲಿ ಸರ್ವೆ ನಂ.21 ಎಂದು ದುರಸ್ತಾಗಿದೆ ಎಂದರೆ 1952 ರಲ್ಲಿ ಮಂಜೂರಾಗಿತ್ತು, ದುರಸ್ತು ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ದುರಸ್ತಾಗಿದ್ದು ನಾನು ಉತ್ತರದಿಕ್ಕಿನಲ್ಲಿ ಇರುವುದಿಲ್ಲ, ಆದ ಕಾರಣ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ಸ್ವಾಧೀನದಲ್ಲಿ ಇದ್ದಾರೆಂದರೆ ಸರಿಯಲ್ಲ. ಪ್ರತಿವಾದಿಗಳು 2 ಎಕರೆಯ ಸ್ವಾಧೀನದಲ್ಲಿ ಇದ್ದಾರೆಂದು ದಾಖಲೆ ನಾನು ನೋಡಿಲ್ಲ. ಮೂಲತಃ ಹನುಮಂತಯ್ಯ ಬಿನ್ ರಂಗಯ್ಯರವರಿಗೆ ಮಂಜೂರಾಗಿದ್ದು ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಗಳ ಹೆಸರಿಗೆ ಪವತಿಖಾತೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಸ್ವಾಧೀನದಲ್ಲಿ ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. 1970 ರ ಕ್ರಯಪತ್ರವನ್ನು ನಾನು ನೋಡಿಲ್ಲ. ದಿಃ05/12/1977 ರ ಕ್ರಯಪತ್ರವನ್ನು ನಾನು ನೋಡಿಲ್ಲ. ವಾದಿಯು ದಾಖಲೆಗಳನ್ನು ಸೃಷ್ಟಿಸಿದ್ದಾರೆಂದರೆ ಸರಿಯಲ್ಲ.

**Re examination - Nil**

(Typed to my dictation in open court)

R.O.I & A.C.

Sd/-

Addl. Senior Civil Judge and
JMFC., Gubbi